# ಗುಲಬರ್ಗಾ ವಿಶ್ವವಿದ್ಯಾಲಯ

## ದೃಶ್ಯಕಲಾ ಅಧ್ಯಯನ ವಿಭಾಗ

"ಜ್ಞಾನಗಂಗಾ", ಗುಲಬರ್ಗಾ–೫೮೫ ೧೦೬ (ಕರ್ನಾಟಕ, ಭಾರತ), ದೂ. ಸಂಖ್ಯೆ. ೦೮೪೭೨–೨೬೩ ೨೭೦

### ಎಂ.ವಿ.ಎ. ಚಿತ್ರಕಲೆ ಸೆಮಿಸ್ಟರ್ ಕೋರ್ಸನ ಪಠ್ಯಕ್ರಮ ಸೂಚಿ (೨೦೧೧–೧೪)

| ಪ್ರಥಮ ಸೆಮಿಸ್ಟರ್ | | ಪರೀಕ್ಷೆ ಅಂಕ | ಆಂತರಿಕ ಅಂಕ | ಒಟ್ಟು ಅಂಕಗಳು |
|---|---|---|---|---|
| **ತಾತ್ವಿಕ ಪತ್ರಿಕೆ** | ೦೧. ಭಾರತೀಯ ಕಲಾ ಇತಿಹಾಸ *(ಪ್ರಾಚೀನ ಕಾಲದಿಂದ ೧೮ನೇ ಶತಮಾನ)* | ೮೦ | ೨೦ | ೧೦೦ |
| | ೦೨. ಭಾರತೀಯ ಕಲಾ ತತ್ವಶಾಸ್ತ್ರ | ೮೦ | ೨೦ | ೧೦೦ |
| **ಪ್ರಾಯೋಗಿಕ ಪತ್ರಿಕೆ** | ೦೩. ಸೃಜನಶೀಲ ರೇಖಾಚಿತ್ರಣ **I(Creative Drawing)** | ೮೦ | ೨೦ | ೧೦೦ |
| | ೦೪. ಸೃಜನಶೀಲ ವರ್ಣಚಿತ್ರಣ **I(Creative Painting)** | ೮೦ | ೨೦ | ೧೦೦ |
| | ೦೫. ಸೃಜನಶೀಲ ಭಿತ್ತಿಚಿತ್ರಣ **I(Creative Mural Painting)** | ೮೦ | ೨೦ | ೧೦೦ |
| | | **ಒಟ್ಟು** | | **೫೦೦** |

| ಎರಡನೇ ಸೆಮಿಸ್ಟರ್ | | ಪರೀಕ್ಷೆ ಅಂಕ | ಆಂತರಿಕ ಅಂಕ | ಒಟ್ಟು ಅಂಕಗಳು |
|---|---|---|---|---|
| **ತಾತ್ವಿಕ ಪತ್ರಿಕೆ** | ೦೬. ಪಾಶ್ಚಾತ್ಯ ಕಲಾ ತತ್ವಶಾಸ್ತ್ರ | ೮೦ | ೨೦ | ೧೦೦ |
| | ೦೭. ಭಾರತೀಯ ಕಲಾ ಇತಿಹಾಸ *(೧೯ನೇ ಶತಮಾನದಿಂದ)* | ೮೦ | ೨೦ | ೧೦೦ |
| **ಪ್ರಾಯೋಗಿಕ ಪತ್ರಿಕೆ** | ೦೮. ಸೃಜನಶೀಲ ರೇಖಾಚಿತ್ರಣ **II(Creative Drawing)** | ೮೦ | ೨೦ | ೧೦೦ |
| | ೦೯. ಸೃಜನಶೀಲ ವರ್ಣಚಿತ್ರಣ **II(Creative Painting)** | ೮೦ | ೨೦ | ೧೦೦ |
| | ೧೦. ಸೃಜನಶೀಲ ಭಿತ್ತಿಚಿತ್ರಣ **II(Creative Mural Painting)** | ೮೦ | ೨೦ | ೧೦೦ |
| | | **ಒಟ್ಟು** | | **೫೦೦** |

| ಮೂರನೇ ಸೆಮಿಸ್ಟರ್ | | ಪರೀಕ್ಷೆ ಅಂಕ | ಆಂತರಿಕ ಅಂಕ | ಒಟ್ಟು ಅಂಕಗಳು |
|---|---|---|---|---|
| **ತಾತ್ವಿಕ ಪತ್ರಿಕೆ** | ೧೧. ಪಾಶ್ಚಾತ್ಯ ಕಲಾ ಇತಿಹಾಸ | ೮೦ | ೨೦ | ೧೦೦ |
| | ೧೨. ಸಂಶೋಧನಾ ವಿಧಾನಗಳು | ೮೦ | ೨೦ | ೧೦೦ |
| **ಪ್ರಾಯೋಗಿಕ ಪತ್ರಿಕೆ** | ೧೩. ಸೃಜನಶೀಲ ರೇಖಾಚಿತ್ರಣ **III(Creative Drawing)** | ೮೦ | ೨೦ | ೧೦೦ |
| | ೧೪. ಸೃಜನಶೀಲ ವರ್ಣಚಿತ್ರಣ **III(Creative Painting)** | ೮೦ | ೨೦ | ೧೦೦ |
| | ೧೫. ಸೃಜನಶೀಲ ಭಿತ್ತಿಚಿತ್ರಣ **III(Creative Mural Painting)** | ೮೦ | ೨೦ | ೧೦೦ |
| | | **ಒಟ್ಟು** | | **೫೦೦** |

| ನಾಲ್ಕನೇ ಸೆಮಿಸ್ಟರ್ | | ಪರೀಕ್ಷೆ ಅಂಕ | ಆಂತರಿಕ ಅಂಕ | ಒಟ್ಟು ಅಂಕಗಳು |
|---|---|---|---|---|
| **ತಾತ್ವಿಕ ಪತ್ರಿಕೆ** | ೧೬. ದೃಶ್ಯಭಾಷೆ **(Visual Language)** | ೮೦ | ೨೦ | ೧೦೦ |
| | ೦೭. ಪ್ರಬಂಧ ರಚನೆ **(Dissertation)** | ೮೦ | ೨೦ | ೧೦೦ |
| **ಪ್ರಾಯೋಗಿಕ ಪತ್ರಿಕೆ** | ೧೮. ಸೃಜನಶೀಲ ರೇಖಾಚಿತ್ರಣ **IV(Creative Drawing)** | ೮೦ | ೨೦ | ೧೦೦ |
| | ೧೯. ಸೃಜನಶೀಲ ವರ್ಣಚಿತ್ರಣ **IV(Creative Painting)** | ೮೦ | ೨೦ | ೧೦೦ |
| | ೨೦. ಸೃಜನಶೀಲ ಭಿತ್ತಿಚಿತ್ರಣ **IV(Creative Mural Painting)** | ೮೦ | ೨೦ | ೧೦೦ |
| | | **ಒಟ್ಟು** | | **೫೦೦** |

**ಗರಿಷ್ಠ ಅಂಕಗಳು – ಒಟ್ಟು ೨೦೦೦**

## ಮೊದಲ ಸೆಮಿಸ್ಟರ್

ಸೂಚನೆ: ಪ್ರತಿಯೊಂದು ಪತ್ರಿಕೆಗೆ ವಾರಕ್ಕೆ ೫ ಗಂಟೆಗಳ ತಾತ್ವಿಕ ಬೋಧನೆ ಮತ್ತು ೧೦ ಗಂಟೆಗಳ ಪ್ರಾಯೋಗಿಕ.

---

**ತಾತ್ವಿಕ ಪತ್ರಿಕೆ : ೧. ಭಾರತೀಯ ಕಲಾ ಇತಿಹಾಸ** (ಪ್ರಾಚೀನ ಕಾಲದಿಂದ ೧೮ನೇ ಶತಮಾನ) **(೧೦೦ ಅಂಕಗಳು)**

**ಘಟಕ ಒಂದು : ಭಾರತೀಯ ಪ್ರಾಗೈತಿಹಾಸಿಕ ಕಾಲದ ಚಿತ್ರಕಲೆ ಹಾಗೂ ಸಾಹಿತ್ಯಿಕ ಆಧಾರಗಳು.**

ಪ್ರಾಗೈತಿಹಾಸಿಕ ಚಿತ್ರಕಲೆಯ ಅರ್ಥ, ಸ್ವರೂಪ, ಪ್ರಕಾರಗಳು, ಪ್ರಾಗೈತಿಹಾಸಿಕ ಕಲೆಯ ಶೋಧನೆಗಳು, ಪ್ರಮುಖ ನೆಲೆಗಳು, ಪ್ರಾಗೈತಿಹಾಸಿಕ ಕಲೆಯು ಅಭಿವ್ಯಕ್ತಗೊಂಡ ರೀತಿ, ವಸ್ತುವಿಷಯ, ಶೈಲಿ, ಲಕ್ಷಣಗಳು, ಕರ್ನಾಟಕದ ಪ್ರಾಗೈತಿಹಾಸಿಕ ಕಲೆಯ ಕುರಿತಾದ ವಿಶೇಷ ಅಧ್ಯಯನ, ಚಿತ್ರಕಲೆ ವಿಷಯದ ಗ್ರಂಥಗಳು, ಚಿತ್ರಕಲೆಯ ಉಲ್ಲೇಖ ಹೊಂದಿದ ಗ್ರಂಥಗಳು ಮತ್ತು ಶಾಸನಗಳು, ಹಸ್ತಪ್ರತಿ ಚಿತ್ರಕಲೆ ಅರ್ಥ, ಸ್ವರೂಪ, ಪ್ರಕಾರಗಳು, ಜೈನ, ಬೌದ್ಧ, ಶೈವ, ವೈಷ್ಣವ, ಮುಸ್ಲಿಮ್ ಇತ್ಯಾದಿ ಹಸ್ತಪ್ರತಿ ಚಿತ್ರಗಳ ವಸ್ತುವಿಷಯ, ಶೈಲಿಗಳ ಅಧ್ಯಯನ.

**ಘಟಕ ಎರಡು : ಭಾರತೀಯ ಚಿತ್ರಕಲೆ ಹಾಗೂ ಕಿರುರೂಪ ಚಿತ್ರಕಲೆ**

ಭಾರತೀಯ ಭಿತ್ತಿ ಚಿತ್ರಕಲೆಯ ಸಿದ್ಧತೆ ಮತ್ತು ವಿಧಿ-ವಿಧಾನಗಳು ***(ಸಿದ್ಧತೆಯ ಪರಿಕರಗಳು ಮತ್ತು ಚಿತ್ರ ರಚನಾ ಪರಿಕರಗಳು),*** ಭಾರತೀಯ ಭಿತ್ತಿ ಚಿತ್ರಕಲೆಯ ಪ್ರಮುಖ ನೆಲೆಗಳು, ವಸ್ತುವಿಷಯ. ಉದಾಹರಣೆಗೆ ***(ಅಜಂತಾ, ಎಲ್ಲೋರಾ, ಭಾಗ್ ಸಿತ್ತನಿವಾಸಲ್),*** ಕರ್ನಾಟಕದ ಪ್ರಾಚೀನ ಚಿತ್ರಕಲೆಯ ನೆಲೆಗಳು. ಉದಾಹರಣೆಗೆ ***(ಬಾದಾಮಿ, ಹಂಪಿ, ಬಿಜಾಪೂರ)*** ಮತ್ತು ೧೭, ೧೮ನೇ ಶತಮಾನದ ಪ್ರಮುಖ ಭಿತ್ತಿಚಿತ್ರ ನೆಲೆಗಳ ಸ್ಥೂಲ ಪರಿಚಯ, ಭಾರತೀಯ ಭಿತ್ತಿ ಚಿತ್ರಕಲೆಯ ಅವನತಿಗೆ ಕಾರಣಗಳು, ರಕ್ಷಣಾ ವಿಧಿ-ವಿಧಾನಗಳು, ಮುಘಲ್ ಪೂರ್ವ ಕಾಲದ ಕಿರುರೂಪ ಚಿತ್ರಕಲೆ ***(ಪಾಲ ಅರಸರ ಜೈನ ಚಿತ್ರಕಲೆ, ಸೇನ ಅರಸರ ಬೌದ್ಧ ಚಿತ್ರಕಲೆ, ಚಾರು ಪಂಚಶಿಖ ಚಿತ್ರಶೈಲಿ),*** ಮುಘಲ್ ಕಾಲದ ಕಿರುರೂಪ ಚಿತ್ರಕಲೆ ***(ಅಕ್ಬರ್, ಜಹಾಂಗೀರ್, ಷಹಜಹಾನ್ ಮತ್ತು ಔರಂಗಜೇಬರ ಕಾಲದ ಚಿತ್ರಕಲೆ),*** ಕಾಳೀಘಾಟ್, ಮಧುಬನಿ, ವಾರ್ಲಿ, ಕಲಂಕಾರಿ ಕಲಾ ಪ್ರಕಾರಗಳು ಸ್ಥೂಲ ಅಧ್ಯಯನ.

**ಘಟಕ ಮೂರು : ಭಾರತೀಯ ಸಾಂಪ್ರದಾಯಿಕ ಚಿತ್ರಕಲೆಯ ಪ್ರಮುಖ ಶೈಲಿಗಳು**

ದಖನಿ ಶೈಲಿ ***(ಬಿಜಾಪೂರ, ಅಹ್ಮದನಗರ, ಗೋಲ್ಕೊಂಡಾ, ಬೀದರ್),*** ರಾಜಸ್ಥಾನಿ ಶೈಲಿ, ***(ಜೈಪುರ, ಮೇವಾರ, ಮಾಳವಾರ, ಬುಂದಿ),*** ಪಹಾಡಿ ಶೈಲಿ ***(ಕಾಂಗ್ರಾ, ಬಶೋಲಿ, ಗುಲೇರ್, ಘರವಾಲ್).***

**ಘಟಕ ನಾಲ್ಕು : ಕರ್ನಾಟಕದ ಸಾಂಪ್ರದಾಯಿಕ ಚಿತ್ರಕಲಾ ಪ್ರಮುಖ ಶೈಲಿಗಳು (ಶಿಷ್ಟ ಪರಂಪರೆ)**

ಚಾಲುಕ್ಯ ಚಿತ್ರಕಲೆ, ಹೊಯ್ಸಳ ಚಿತ್ರಕಲೆ, ವಿಜಯನಗರ ಚಿತ್ರಕಲೆ, ಮೈಸೂರು ಚಿತ್ರಕಲೆ, ಸುರಪುರ ಚಿತ್ರಕಲೆ, ಕರಾವಳಿ ಚಿತ್ರಕಲೆ, ಗಂಜೀಫಾ ಚಿತ್ರಕಲೆ, ಗಾಜಿನ ಮೇಲಿನ ಚಿತ್ರಕಲೆ.

**ಘಟಕ ಐದು : ಕರ್ನಾಟಕದ ಪ್ರಮುಖ ಜನಪದ ಚಿತ್ರಕಲಾ ಶೈಲಿಗಳು**

ರಂಗೋಲಿ ಚಿತ್ರಕಲೆ, ಹಚ್ಚೆ ಚಿತ್ರಕಲೆ, ತೊಗಲುಗೊಂಬೆ ಚಿತ್ರಕಲೆ, ಹಸೆ ಚಿತ್ರಕಲೆ, ಬೆಳದಿಂಗಳ, ಶೀಗಿ ಮತ್ತು ಕಸೂತಿ ಚಿತ್ರಕಲೆ, ಬಿದರಿ ಕಲೆ, ಕಿನ್ನಾಳ, ಕಲಘಟಗಿ, ಗೋಕಾಕ್, ಚನ್ನಪಟ್ಟಣ, ತಾಳಿಕೋಟೆ ಮುಂತಾದ ಜನಪದ ಕಲಾ ಕೇಂದ್ರಗಳು, ಹಬ್ಬ, ಹುಣ್ಣಿಮೆ, ಉತ್ಸವ, ಜಾತ್ರೆ, ಮದುವೆ, ಯಕ್ಷಗಾನ, ಬಯಲಾಟ, ಭೂತಾರಾಧನೆ, ನಾಗಾರಾಧನೆ, ಮುಖವಾಡ ಇತ್ಯಾದಿ ಆಚರಣೆ ಸಂಬಂಧಿ ಚಿತ್ರಕಲೆ ಕುರಿತಾದ ಅಧ್ಯಯನ.

***ಪರಾಮರ್ಶನ ಗ್ರಂಥಗಳು :***


೧. ಪ್ರಾಗೈತಿಹಾಸಿಕ ಚಿತ್ರಕಲೆ : ಡಾ. ಅ. ಸುಂದರ
೨. ಭಿತ್ತಿಚಿತ್ರ ಪರಂಪರೆ : ಡಾ. ಅ.ಲ. ನರಸಿಂಹನ್
೩. ದಖನಿ ಚಿತ್ರಕಲೆ : ಡಾ. ಎಸ್.ಕೆ. ಅರುಣಿ
೪. ಬಿದರಿ ಚಿತ್ರಕಲೆ : ಡಾ. ವಿ.ಎಂ. ಬಾಗಾಯತ
೫. ಕರ್ನಾಟಕದ ಜನಪದ ಚಿತ್ರಕಲೆ : ಡಾ. ಎಸ್.ಸಿ. ಪಾಟೀಲ
೬. ಸುರಪುರ ಚಿತ್ರಕಲೆ : ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ

**ತಾತ್ವಿಕ ಪತ್ರಿಕೆ ೦೨ : ಭಾರತೀಯ ಕಲಾ ತತ್ವಶಾಸ್ತ್ರ (೧೦೦ ಅಂಕಗಳು)**

**ಘಟಕ ಒಂದು : ಭಾರತೀಯ ಸೌಂದರ್ಯಶಾಸ್ತ್ರ**

ಭಾರತೀಯ ಸೌಂದರ್ಯಶಾಸ್ತ್ರದ ಅರ್ಥ, ಪರಿಕಲ್ಪನೆ, ಸ್ವರೂಪ, ಸೌಂದರ್ಯ ಕುರಿತಾಗಿ ಭಾರತೀಯ ಚಿಂತಕರ ವಿಚಾರ ಧಾರೆಗಳು, ಸೌಂದರ್ಯ ಕುರಿತಾದ ಪ್ರಾಚೀನ ಗ್ರಂಥಗಳು (ವಿಷ್ಣುಧರ್ಮೋತ್ತರ ಪುರಾಣ, ಸಮರಾಂಗಣ ಸೂತ್ರಧಾರ, ಮಾನಸೋಲ್ಲಾಸ, ಶಿಲ್ಪರತ್ನ, ಶಿವತತ್ವ ರತ್ನಾಕರ ಇತ್ಯಾದಿ).

**ಘಟಕ ಎರಡು : ಭಾರತೀಯ ಕಲಾಶಾಸ್ತ್ರದ ಮೂಲ ಚಿಂತನಾ ಮಾರ್ಗ, ದೃಶ್ಯಕಲೆಯ ಹಿನ್ನೆಲೆಯಲ್ಲಿ**

ವೇದಗಳು, ಉಪನಿಷತ್ತುಗಳ ಸಾಹಿತ್ಯ, ಬೌದ್ಧ, ಜೈನ ಸಾಹಿತ್ಯ, ಶೈವ, ವೈಷ್ಣವ, ಸೂಫಿ ಪಂಥದ ವಿಚಾರ ಧಾರೆಗಳು, ದೃಶ್ಯಕಲೆ ಮತ್ತು ಸಾಹಿತ್ಯ, ದೃಶ್ಯಕಲೆ ಮತ್ತು ಸಂಗೀತ, ದೃಶ್ಯಕಲೆ ಮತ್ತು ಪ್ರದರ್ಶನ ಕಲೆ ***(ನಾಟಕ, ನೃತ್ಯ, ಯಕ್ಷಗಾನ).***

**ಘಟಕ ಮೂರು : ಭಾರತೀಯ ದೃಶ್ಯಕಲೆಯ ಉಗಮದ ಸಿದ್ಧಾಂತಗಳು**

ಪುರಾಣ ಸಂಪ್ರದಾಯ, ದೇವಸ್ಥಾನ ಸಂಪ್ರದಾಯ, ಜನಪದ ದೃಶ್ಯಕಲಾ ಸಂಪ್ರದಾಯ, ಭರತನ ರಸಸಿದ್ಧಾಂತ, ಸಾಂಖ್ಯ, ಸಾಧಾರಣೀಕರಣ ಸಿದ್ಧಾಂತ, ಪ್ರತಿಭೆ, ಔಚಿತ್ಯ ಮತ್ತು ರೀತಿ ಸಿದ್ಧಾಂತಗಳ ಸ್ಥೂಲ ಅಧ್ಯಯನ.

**ಘಟಕ ನಾಲ್ಕು : ದೃಷ್ಟಿ–ಸಮಗ್ರತೆ**

ಭಾರತೀಯ ಕಲೆಯ ಸೈದ್ಧಾಂತಿಕ ಭಾವರೂಪಗಳ ಪರಿಕಲ್ಪನೆ, ಸಂವೇದನೆ, ಪ್ರತ್ಯಕ್ಷಾನುಭವ, ಬಿಂಬಕಲ್ಪನೆ, ಸಮಸ್ಯೆಗಳು, ಪರಿಹಾರ, ಕಲಾವಿದ, ಕಲಾಕೃತಿ, ಸಹೃದಯ ಇವುಗಳ ನಡುವಿನ ಸಹಸಂಬಂಧ, ಕಲಾ ಪ್ರದರ್ಶನ, ಕಲಾ ಪ್ರದರ್ಶನಾಲಯ, ಕಲಾ ಗ್ರಹಿಕೆ.

**ಘಟಕ ಐದು : ಸಮಕಾಲೀನ ಸಂದರ್ಭದ ಸೌಂದರ್ಯ ಪ್ರಜ್ಞೆಯ ಪರಿಕಲ್ಪನೆಗಳು**

ಸಮಕಾಲೀನ ಸಂದರ್ಭದಲ್ಲಿ ಸೌಂದರ್ಯದ ವಿಭಿನ್ನ ಆಯಾಮಗಳು, ಇವುಗಳನ್ನು ದೃಶ್ಯಕಲೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು. ಉದಾಹರಣೆಗೆ ವಿಕೃತಿ, ಸುಂದರತೆ ಇತ್ಯಾದಿ.

***<u>ಪರಾಮರ್ಶನ ಗ್ರಂಥಗಳು :</u>***


೧. ಸೌಂದರ್ಯ ಶಾಸ್ತ್ರ : (ಅನು) ಡಾ. ಕಾಶೀನಾಥ ಅಂಬಲಗಿ

೨. ಸೌಂದರ್ಯ ಸಮೀಕ್ಷೆ : ಡಾ. ಜಿ.ಎಸ್. ಶಿವರುದ್ರಪ್ಪ

೩. ಸತ್ಯ ಮತ್ತು ಸೌಂದರ್ಯ : ಡಾ. ಎಸ್.ಎಲ್. ಭೈರಪ್ಪ

೪. ಭಾರತೀಯ ಕಾವ್ಯ ಮೀಮಾಂಸೆ : ತೀ.ನಂ. ಶ್ರೀಕಂಠಯ್ಯ

೫. ಇಂಡಿಯನ್ ಎಸ್ಥೆಟಿಕ್ಸ್ : ಕೆ.ಎಸ್. ರಾಮಸ್ವಾಮಿ


## ***<u>ಪ್ರಾಯೋಗಿಕ ಪತ್ರಿಕೆಗಳು</u>***

**ಪ್ರಾಯೋಗಿಕ ಪತ್ರಿಕೆ ೦೩ : ಸೃಜನಶೀಲ ರೇಖಾಚಿತ್ರಣ I(Creative Drawing) (ಅಂಕಗಳು ೧೦೦)**

**ಪ್ರಾಯೋಗಿಕ ಪತ್ರಿಕೆ ೦೪ : ಸೃಜನಶೀಲ ವರ್ಣಚಿತ್ರಣ I(Creative Painting) (ಅಂಕಗಳು ೧೦೦)**

**ಪ್ರಾಯೋಗಿಕ ಪತ್ರಿಕೆ ೦೫ : ಸೃಜನಶೀಲ ಭಿತ್ತಿಚಿತ್ರಣ I(Creative Mural Painting) (ಅಂಕಗಳು ೧೦೦)**

## ಎರಡನೆಯ ಸೆಮಿಸ್ಟರ್

**ತಾತ್ವಿಕ ಪತ್ರಿಕೆ : ೬. ಪಾಶ್ಚಾತ್ಯ ಕಲಾ ಇತಿಹಾಸ (೧೦೦ ಅಂಕಗಳು)**

**ಘಟಕ ಒಂದು :** ಕಲೆ ಎಂದರೇನು, ಕಲಾ ತತ್ವಶಾಸ್ತ್ರದ ಸ್ವರೂಪ ಮತ್ತು ವ್ಯಾಪ್ತಿ, ಪಾಶ್ಚಾತ್ಯ ತತ್ವಜ್ಞಾನಿಗಳ ಔಚಿತ್ಯ ಕುರಿತಾದ ಅಧ್ಯಯನ (ಮಾನವೀಯ ಬೆಳವಣಿಗೆಯ ವಿವಿಧ ಹಂತಗಳಲ್ಲಿ, ಭಾವನಾತ್ಮಕ ಕಲಾಸೃಷ್ಟಿ ಅವರ ಸಿದ್ಧಾಂತಗ ಔಚಿತ್ಯದ ಬಗ್ಗೆ ವಿಶ್ಲೇಷಣೆ).

**ಘಟಕ ಎರಡು :** ಸಂಪ್ರದಾಯಿಕ ಕಲಾ ಸಿದ್ಧಾಂತಗಳು, ಕಲೆ ಮತ್ತು ಸೌಂದರ್ಯ ಸಿದ್ಧಾಂತ, ಕಲಾ ಸಿದ್ಧಾಂತ ಒಂದು ಅನುಕರಣಾತ್ಮಕ ವಿಧಾನ–ಪ್ಲೇಟೋ ಮತ್ತು ಅರಿಸ್ಟಾಟಲ್, ತತ್ವಜ್ಞಾನಿಗಳ ಮಾನವತಾವಾದಿ ಸಿದ್ಧಾಂತ, ಕಲೆಯ ಭಾವನೆಗಳು ಸಂವಹನ ಸಿದ್ಧಾಂತ.

**ಘಟಕ ಮೂರು :** ನವ್ಯಕಲಾ ಸಿದ್ಧಾಂತಗಳು, ಕಲೆಯಲ್ಲಿ ಆಕಾರ ಸೂಚಿ ಸಿದ್ಧಾಂತ, ಕ್ಲೈವ್ ಬೆಲ್, ಸುಸನ್ಲಾಂಗರ್ ಕಲೆ ಒಂದು ಅಂತರ್‌ದೃಷ್ಟಿ ಸಿದ್ಧಾಂತ, ಜಾಗೃತ ಮತ್ತು ಅಜಾಗೃತಾವಸ್ಥೆಗಳ ಪರಸ್ಪರ ಪ್ರತಿಕ್ರಿಯೆಗಳನ್ನು ಪರೀಕ್ಷಿಸುವ ಫ್ರೈಡ್ ಮತ್ತು ಸಿ.ಜೆ. ಜಂಗ್ ಅವರ ಸಿದ್ಧಾಂತ, ಪ್ರಮಾಣದ ರುಚಿ ತರ್ಕ ಸಿದ್ಧಾಂತ, ಡೆವಿಡ್ ಹ್ಯೂಮ್, ಪ್ರಾಂಚಿಸ್, ಹಚನಸನ್, ರಸಸ್ವಾದ ನಿರ್ಣಯ ಸಿದ್ಧಾಂತ, ಇಮ್ಯಾನುವಲ್ ಕಾಂಟ್.

**ಘಟಕ ನಾಲ್ಕು :** ಸಮಕಾಲೀನ ಕಲಾ ಸಿದ್ಧಾಂತಗಳು, ರಸಸ್ವಾದ ಭಂಗಿ ಸಿದ್ಧಾಂತ– ಜಾರ್ಜ ಡಿಕಿ, ರಸಸ್ವಾದ ದರ್ಜೆ ಸಿದ್ಧಾಂತ– ಫ್ರಾಂಕ್ ಮತ್ತು ಎನ್‌ಸಿಬ್ಲಿ, ಅಸ್ತಿತ್ವವಾದಿ ಸಿದ್ಧಾಂತ.

**ಘಟಕ ಐದು :** ಮಾನಸಿಕ ದೂರ ಸಿದ್ಧಾಂತ– ಎಡ್ವರ್ಡ ಬುಲ್ಲೋ, ನಿರಚನ ಸಿದ್ಧಾಂತ, ಭಾರತೀಯ ಸಮಕಾಲೀನ ಕಲೆಯ ಮೇಲೆ ಪಾಶ್ಚಾತ್ಯ ಕಲಾ ಸಿದ್ಧಾಂತಗಳ ಪ್ರಭಾವ, ಪ್ರೇರಣೆಗಳು.

***<u>ಪರಾಮರ್ಶನ ಗ್ರಂಥಗಳು :</u>***


೧. ಸೌಂದರ್ಯ ಶಾಸ್ತ್ರ : ಡಾ. ಕಾಶೀನಾಥ ಅಂಗಲಗಿ
೨. ದೃಶ್ಯ ಸಂಚಲನ : ಡಾ. ಎಸ್.ಸಿ. ಪಾಟೀಲ
೩. ನಿಜದ ನೆಲೆ : (ಸಂ.) ಡಾ. ಎಸ್.ಸಿ. ಪಾಟೀಲ ಮತ್ತು ಸತ್ಯಾನಂದ ಪಾತ್ರೋಟ
೪. ಪಾಶ್ಚಾತ್ಯ ಕಾವ್ಯಮೀಮಾಂಸೆ : ಡಾ. ಬಿ.ಬಿ. ಹೆಂಡಿ


**ತಾತ್ವಿಕ ಪತ್ರಿಕೆ : ೭ ಭಾರತೀಯ ಕಲಾ ಇತಿಹಾಸ (೧೯ನೇ ಶತಮಾನದಿಂದ) (ಅಂಕಗಳು ೧೦೦)**

**ಘಟಕ ಒಂದು :** ರಾಜಸ್ತಾನ ಮತ್ತು ಹಿಲ್‌ಕೋರ್ಟಗಳಲ್ಲಿ ರಾಜಾಶ್ರಯ ಪಡೆದಿದ್ದ ಸಾಂಪ್ರದಾಯಿಕ ಕಲೆಯು ಅವನತಿಯತ್ತ ಸಾಗಿತ ಸೂಚನೆಗಳು ಮತ್ತು ಐತಿಹಾಸಿಕ ಹಿನ್ನೆಲೆಗಳು, ಯುರೋಪಿಯನ್ ಕಲೆಗಳಾದ ಕೆತ್ತನೆಯ ಕುಸುರಿ ಕಲಾವಸ್ತು, ಪ್ರಾಸ್ಟರ್ ಎರಕದ ಕಲಾಕೃತಿಗಳು ಭಾರತೀಯ ಕಲಾಪ್ರಿಯರ ಮೇಲಾದ ವಿಶೇಷ ಪ್ರಭಾವ ಕುರಿತಾದ ಅಧ್ಯಯನ.

**ಘಟಕ ಎರಡು :** ಬ್ರಿಟೀಷ್ ಕಲಾಶೈಲಿ ಅಳವಡಿಸಿಕೊಂಡ ರಾಜಾ ರವಿವರ್ಮ ಮತ್ತು ಅವನ ಅನುಯಾಯಿಗಳ ಕಲಾದೃಷ್ಟಿ ಮತ್ತು ಕೃತಿಗಳ ಕುರಿತಾದ ಅಧ್ಯಯನ.

**ಘಟಕ ಮೂರು :** ಭಾರತೀಯ ಸಾಂಪ್ರದಾಯಿಕ ಕಲೆಯ ಪುನರುತ್ಥಾನ, ಬಂಗಾಳಿ ಕಲಾಪಂಥ ಮತ್ತು ಆನಂದ ಕೂಮಾರಸ್ವಾಮಿ, ಇ.ಬಿ. ಹ್ಯಾವೆಲ್, ರವೀಂದ್ರನಾಥ ಟ್ಯಾಗೋರ್, ಅಬನೇಂದ್ರನಾಥ ಟ್ಯಾಗೋರ್ ಅವರ ಕಲಾಕೃತಿಗಳ ಅಧ್ಯಯನ.

**ಘಟಕ ನಾಲ್ಕು :** ಬ್ರಿಟೀಷ್ ಕಾಲದಲ್ಲಿ ಆರಂಭಗೊಂಡ ಕಲ್ಕತ್ತ, ಮದ್ರಾಸ್, ಮುಂಬೈ, ಲಹೋರ್ ಕಲಾಶಾಲೆಗಳು ಮತ್ತು ಅಲ್ಲಿಯ ಕಲಾ ವಾತಾವರಣ ಕುರಿತಾದ ಅಧ್ಯಯನ.

**ಘಟಕ ಐದು :** ಸ್ವಾತಂತ್ರ್ಯೋತ್ತರ ಕಾಲದಲ್ಲಿ ಬೆಳೆದುಬಂದ ಭಾರತೀಯ ಆಧುನಿಕ ಕಲೆ ಮತ್ತು ಕಲಾವಿದರ ಕಲಾದೃಷ್ಟಿ ಉದಾಹರಣೆಗಾಗಿ ಎಂ.ಎ. ಚೆಟ್ಟಿ, ಎಸ್.ಎಂ. ಪಂಡಿತ, ರುಮಾಲೆ ಚನ್ನಬಸವಯ್ಯ, ಕೆ. ವೆಂಕಟಪ್ಪ, ಅಮೃತ ಶೇರಗಿಲ್, ಎಂ.ಎಫ್. ಹುಸೇನ್, ಕೆ.ಕೆ. ಹೆಬ್ಬಾರ, ಆರ್.ಎಂ. ಹಡಪದ, ಸಮಕಾಲೀನ ಕಲೆಯ ಇತಿಹಾಸ ಪರಂಪರೆಯ ಸ್ವರೂಪ ಹಾಗೂ ಬರಹಗಾರರು.

***<u>ಪರಾಮರ್ಶನ ಗ್ರಂಥಗಳು :</u>***


೧. ಕಲಾ ಪ್ರಪಂಚ : ಡಾ. ಶಿವರಾಮ ಕಾರಂತ
೨. ದೃಶ್ಯಕಲಾವಿದರು : ಎನ್. ಮರಿಶಾಮಾಚಾರ್
೩. ಭಾರತೀಯ ಚಿತ್ರಕಲೆ : ಡಾ. ಶಿವರಾಮ ಕಾರಂತ
೪. ಪಾಶ್ಚಾತ್ಯ ಚಿತ್ರಕಲೆ : ಬಿ.ಪಿ. ಬಾಯಿರಿ
೫. ಕಲೆಗಾರರ ಕಥೆಗಳು : ಬಿ.ಪಿ. ಬಾಯಿರಿ
೬. ಚಿತ್ರಕಲಾ ಪ್ರಪಂಚ : (ಪ್ರ.ಸಂ.) ಪಿ.ಆರ್. ತಿಪ್ಪೇಸ್ವಾಮಿ

**ಪ್ರಾಯೋಗಿಕ ಪತ್ರಿಕೆಗಳು**

ಪ್ರಾಯೋಗಿಕ ಪತ್ರಿಕೆ ೦೮ : ಸೃಜನಶೀಲ ರೇಖಾಚಿತ್ರಣ II(Creative Drawing) (ಅಂಕಗಳು ೧೦೦)

ಪ್ರಾಯೋಗಿಕ ಪತ್ರಿಕೆ ೦೯ : ಸೃಜನಶೀಲ ವರ್ಣಚಿತ್ರಣ II(Creative Painting) (ಅಂಕಗಳು ೧೦೦)

ಪ್ರಾಯೋಗಿಕ ಪತ್ರಿಕೆ ೧೦ : ಸೃಜನಶೀಲ ಭಿತ್ತಿಚಿತ್ರಣ II(Creative Mural Painting) (ಅಂಕಗಳು ೧೦೦)

## ಮೂರನೆಯ ಸೆಮಿಸ್ಟರ್

**ತಾತ್ವಿಕ ಪತ್ರಿಕೆ : ೧೧. ಪಾಶ್ಚಾತ್ಯ ಕಲಾ ಇತಿಹಾಸ (೧೦೦ ಅಂಕಗಳು)**

**ಘಟಕ ಒಂದು : ಪಾಶ್ಚಾತ್ಯ ಪುನರುಜ್ಜೀವನ ಯುಗದ ಕಲೆ**

ಪಾಶ್ಚಾತ್ಯ ಪುನರುಜ್ಜೀವನ ಪೂರ್ವದ ಕಲೆ: ಗೋಥಿಕ್ ಕಲೆಯ ಅರ್ಥ, ಸ್ವರೂಪ, ಲಕ್ಷಣ, ಪ್ರಮುಖ ಕಲಾವಿದರ ಸ್ಥೂಲ ಪರಿಚಯ. (ಉದಾಹರಣೆಗೆ ಲಿಯೊನಾರ್ಡೊ ಡಾ ವಿನ್ಸಿ), ಪಾಶ್ಚಾತ್ಯ ಪುನರುಜ್ಜೀವನ ಕಾಲದ ಕಲೆಯ ಆರಂಭ, ಸ್ವರೂಪ, ಬೆಳವಣಿಗೆ, ಪ್ರಮುಖ ಕಲಾವಿದರು, ಕಲಾಶೈಲಿ ಮತ್ತು ಕಲೆಯ ಮೂಲಗಳು.

**ಘಟಕ ಎರಡು : ಬಾರೋಕ್ ಕಲೆ ಮತ್ತು ರೋಕೋಕೋ ಕಲೆ**

ಬಾರೋಕ್ ಕಲೆಯ ಅರ್ಥ, ಲಕ್ಷಣಗಳು, ಪ್ರಕಾರ, ಪ್ರಮುಖ ಕಲಾವಿದರು, ಮೈಕಲ್ ಎಂಜಿಲೋ, ಬಿರ್ನಿನಿ, ರೆಂಬ್ರಾಂಟ್, ರೂಬೆನ್ಸ್, ಫ್ರಾನ್ಸ್‌ಹಾಲ್ಸ್ ಇವರುಗಳ ಕಲಾಶೈಲಿ ಮತ್ತು ಅವರ ಕೃತಿಗಳ ಅಧ್ಯಯನ, ರೋಕೋಕೋ ಕಲೆಯ ಅರ್ಥ, ಸ್ವರೂಪ, ಪ್ರಮುಖ ಲಕ್ಷಣಗಳು, ಪ್ರಸಾರ, ಪ್ರಮುಖ ಕಲಾವಿದರ ಅಧ್ಯಯನ.

**ಘಟಕ ಮೂರು : ನವ್ಯ ಕಲಾ ಪಂಥಗಳು ಮತ್ತು ಕಲಾವಿದರು**

ಇಂಪ್ರೆಷನಿಸಮ್, ಎಕ್ಸಪ್ರೆಶನಿಸಮ್, ಕ್ಯೂಬಿಸಂ ಮತ್ತು ಸರ್ರಿಯಲಿಸಂ ಕಲಾ ಪಂಥಗಳ ಅರ್ಥ, ಸ್ವರೂಪ, ಲಕ್ಷಣಗಳು, ಪ್ರಸಾರ, ಪ್ರಮುಖ ಕಲಾವಿದರು. ಪ್ಯಾಬ್ಲೋ ಪಿಕಾಸೋ, ಪಾಲ್‌ಗಾಗಿನ್, ಹೆನ್ರಿಮಾತಿಶ್ ಇವರುಗಳ ಕಲಾಶೈಲಿ, ಕಲಾ ಮೂಲಗಳು ಮತ್ತು ಕಲಾಕೃತಿಗಳ ಅಧ್ಯಯನ.

**ಘಟಕ ನಾಲ್ಕು : ಜನಪ್ರಿಯ ಕಲೆ (ಪಾಪ್ ಕಲೆ)**

ಪಾಪ್ ಕಲೆಯ ಅರ್ಥ, ಸ್ವರೂಪ, ಯುರೋಪ್ ಹಾಗೂ ಅಮೆರಿಕಾಗಳಲ್ಲಿ ಈ ಕಲೆ ಬೆಳದ ರೀತಿ, ಪ್ರಮುಖ ಕಲಾವಿದರು, ಅವರ ಕಲಾಕೃತಿಗಳ ಸ್ಥೂಲ ಅಧ್ಯಯನ.

**ಘಟಕ ಐದು : ಪಾಶ್ಚಾತ್ಯ ನವ್ಯ ಕಲಾಶೈಲಿಯ ಪರಿಣಾಮ**

ಪಾಶ್ಚಾತ್ಯ ನವ್ಯ ಕಲಾಶೈಲಿಗಳು ಭಾರತೀಯ ದೃಶ್ಯಕಲಾ ಕ್ಷೇತ್ರದ ಮೇಲೆ ಬೀರಿದ ಪರಿಣಾಮಗಳು ಮತ್ತು ಅದರಿಂದುಂಟಾದ ಬದಲಾವಣೆಗಳು.

*ಪರಾಮರ್ಶನ ಗ್ರಂಥಗಳು :*

೧. ಬಾರೋಕ್ ಕಲೆ : ಡಾ. ಎಸ್.ಸಿ. ಪಾಟೀಲ
೨. ಲಲಿತಕಲಾ ಅಕಾಡೆಮಿ ಪ್ರಕಟಣೆಗಳು (ಕಲಾ ವಾದಗಳು)
೩. ಪಾಶ್ಚಾತ್ಯ ಕಲಾವಿದರು : ಬಿ.ಪಿ. ಬಾಯಿರಿ
೪. ಕಲಾದಿಗ್ಗಜರು : ಎನ್. ಮರಿಶಾಮಾಚಾರ್
೫. ಪಾಶ್ಚಾತ್ಯ ಕಲಾವಿದರು : ಕಲಮದಾನಿ ಗುರುರಾಯ
೬. ಕಲಾಪ್ರಪಂಚ : ಡಾ. ಶಿವರಾಮ ಕಾರಂತ
೭. ಪಿಕಾಸೋ : ಸುರೇಶ ಕುಲಕರ್ಣಿ

**ತಾತ್ವಿಕ ಪತ್ರಿಕೆ : ೧೨. ದೃಶ್ಯಕಲಾ ಸಂಶೋಧನಾ ವಿಧಾನಗಳು (೧೦೦ ಅಂಕಗಳು)**

**ಘಟಕ ಒಂದು : ದೃಶ್ಯಕಲಾ ಸಂಶೋಧನೆ**

ಸಂಶೋಧನೆ ಎಂದರೇನು, ದೃಶ್ಯಕಲಾ ಸಂಶೋಧನೆಯ ಅರ್ಥ ಮತ್ತು ಅಗತ್ಯತೆ, ದೃಶ್ಯಕಲಾ ಸಂಶೋಧನೆ ಹಾಗೂ ಪೂರಕ ಕಲೆಗ ಸಂಶೋಧನೆಗಳ ಸಹಸಂಬಂಧಗಳು ಹಾಗೂ

ವ್ಯತ್ಯಾಸಗಳು, ಕರ್ನಾಟಕದಲ್ಲಿ ದೃಶ್ಯಕಲಾ ಸಂಶೋಧನೆಯ ಇತಿಹಾಸ ಮತ್ತು ವೈವಿಧ್ಯತೆ, ಮೂಲಭೂತ ಸಂಶೋಧನೆ, ಆನುಷಂಗಿಕ ಸಂಶೋಧನೆ, ಕ್ರಿಯಾ ಸಂಶೋಧನೆ.

**ಘಟಕ ಎರಡು : ಸಂಶೋಧನ ಅಧ್ಯಯನದ ವಿಧಾನಗಳು**

ವ್ಯಕ್ತಿ ಅಧ್ಯಯನ, ಅಂತರಶಿಸ್ತೀಯ ಅಧ್ಯಯನ, ತೌಲನಿಕ ಅಧ್ಯಯನ, ಐತಿಹಾಸಿಕ ಅಧ್ಯಯನ, ವಿವರಣಾತ್ಮಕ ಅಧ್ಯಯನ, ಆನ್ವಯಿಕ ಅಧ್ಯಯನ.

**ಘಟಕ ಮೂರು : ಸಂಶೋಧನೆಯ ಪ್ರಾಥಮಿಕ ಹಂತಗಳು**

ವಿಷಯದ ಆಯ್ಕೆ, ಊಹಾತ್ಮಕ ಸಿದ್ಧಾಂತದ ಪರಿಕಲ್ಪನೆ, ಸಂಶೋಧನೆಯ ರೂಪರೇಷೆ, ಪರಾಮರ್ಶನ ಗ್ರಂಥಸೂಚಿ, ವಿಷಯ ಸಂಗ್ರಹಣೆ, ಮೂಲ ಆಕರ ಸಾಮಗ್ರಿ, ಆನುಷಂಗಿಕ ಆಕರ ಸಾಮಗ್ರಿ, ಪ್ರಾಮಾಣಿಕ ಮತ್ತು ಅಪ್ರಾಮಾಣಿಕ ಸಾಮಗ್ರಿ.

**ಘಟಕ ನಾಲ್ಕು : ಕ್ಷೇತ್ರಕಾರ್ಯ**

ಕ್ಷೇತ್ರಕಾರ್ಯದ ಪೂರ್ವ ಸಿದ್ಧತಾ ಹಂತ, ಕ್ಷೇತ್ರಕಾರ್ಯದ ಹಂತ, ಕ್ಷೇತ್ರಕಾರ್ಯದ ನಂತರದ ಹಂತ.

**ಘಟಕ ಐದು : ಸಂಶೋಧನಾ ಪ್ರಬಂಧ ರಚನೆಯ ವಿನ್ಯಾಸ**

ಶೀರ್ಷಿಕೆ, ಪ್ರಮಾಣ ಪತ್ರ, ಪರಿವಿಡಿ, ಪ್ರಸ್ತಾವನೆ, ಸಂಶೋಧನೆ, ಸಾಹಿತ್ಯ ಸಮೀಕ್ಷೆ, ವಿಧಾನ, ವಿಶ್ಲೇಷಣೆ, ವ್ಯಾಖ್ಯಾನ, ಸಮಾರೋಪ, ಸಾರಲೇಖದ ಅರ್ಥ, ಪರಿಕಲ್ಪನೆ, ಪ್ರಬಂಧ ಪೂರ್ವದ ಸಾರಲೇಖ ಮತ್ತು ಪ್ರಬಂಧ ಪೂರ್ಣಗೊಂಡ ನಂತರದ ಸಾರಲೇಖ, ಅನುಬಂಧಗಳು, ಗ್ರಂಥಋಣ, ವ್ಯಕ್ತಗಳು, ನಕಾಶೆ, ಸಂಕ್ಷೇಪಗಳು, ಅಡಿಟಿಪ್ಪಣಿ ಇತ್ಯಾದಿ.

***<u>ಪರಾಮರ್ಶನ ಗ್ರಂಥಗಳು :</u>***


೧. ಸಂಶೋಧನಾ ಸ್ವರೂಪ : ಡಾ. ಬಿ.ವ್ಹಿ. ಶಿರೂರ

೨. ಸಂಶೋಧನೆ : ಡಾ. ಎಂ. ಚಿದಾನಂದಮೂರ್ತಿ

೩. ಕನ್ನಡ ಸಂಶೋಧನ ಶಾಸ್ತ್ರ : ಡಾ. ಎಂ.ಎಂ. ಕಲಬುರ್ಗಿ

೪. ಸಾಂಸ್ಕೃತಿಕ ಸಂಶೋಧನ : ಡಾ. ತಾಳ್ತಜೆ ವಸಂತಕುಮಾರ


***<u>ಪ್ರಾಯೋಗಿಕ ಪತ್ರಿಕೆಗಳು</u>***

**ಪ್ರಾಯೋಗಿಕ ಪತ್ರಿಕೆ ೧೩ : ಸೃಜನಶೀಲ ರೇಖಾಚಿತ್ರಣ III(Creative Drawing) (ಅಂಕಗಳು ೧೦೦)**

**ಪ್ರಾಯೋಗಿಕ ಪತ್ರಿಕೆ ೧೪ : ಸೃಜನಶೀಲ ವರ್ಣಚಿತ್ರಣ III(Creative Painting) (ಅಂಕಗಳು ೧೦೦)**

**ಪ್ರಾಯೋಗಿಕ ಪತ್ರಿಕೆ ೧೫ : ಸೃಜನಶೀಲ ಭಿತ್ತಿಚಿತ್ರಣ III(Creative Mural Painting) (ಅಂಕಗಳು ೧೦೦)**

## ನಾಲ್ಕನೆಯ ಸೆಮಿಸ್ಟರ್

**ತಾತ್ವಿಕ ಪತ್ರಿಕೆ : ೧೬. ದೃಶ್ಯಭಾಷೆ (Visual Language) (೧೦೦ ಅಂಕಗಳು)**

**ಘಟಕ ಒಂದು :** ಭಾಷೆಯ ಅರ್ಥ ಸ್ವರೂಪ ವ್ಯಾಖ್ಯಾನ, ಪ್ರಾಗೈತಿಹಾಸಿಕ ಹಿನ್ನೆಲೆಯಲ್ಲಿ ದೃಶ್ಯಭಾಷೆಯ ಉತ್ಪತ್ತಿ ಕುರಿತಾದ ಅಧ್ಯಯನ, ಉದಾಹರಣೆಗೆ ಅನುಕರಣೆ, ಅಭಿವ್ಯಕ್ತಿ, ಧಾರ್ಮಿಕ/ಸಂಪ್ರದಾಯ, ಆಚರಣೆ ಹಾಗೂ ದಿನನಿತ್ಯ ಜೀವನದ ಆಚರಣೆಗಳು.

**ಘಟಕ ಎರಡು :** ನಾಗರೀಕತೆ, ಪ್ರೇತಭೂತಗಳ ಆಕಾರಗಳು ಕಾಣಿಸಿಕೊಂಡ ಅನುಭವಗಳು ಹಾಗೂ ಪೂರ್ವಜರನ್ನು ಆರಾಧಿಸುವ ದೇವಸ್ಥಾನಗಳು, ಗುಂಬಜಗಳ ಕುರಿತು ಪೂರ್ವಿಕರ ವಿನ್ಯಾಸ, ಪರಿಕಲ್ಪನೆ, ನಿಗೂಢವಾದ ಅಥವಾ ಅಶರೀರ ಕುರಿತು ಆಲೋಚನೆಗಳು ಗೌಪ್ಯ ಆಕಾರಗಳು ಉದಾಹರಣೆಗೆ ಈಜಿಪ್ತನ್ ಸ್ಫಿಂಕ್ಸ್ ಅಥವಾ ಪಿರಾಮಿಡ್ಸ್ ಆಕಾರದ ಪರಿಕಲ್ಪನೆ ಮುಂತಾದವುಗಳು.

**ಘಟಕ ಮೂರು :** ಕಲೆ ಮತ್ತು ಧರ್ಮ: ಕ್ರಿಸ್ತನ ನಂತರದ ಪುರಾಣ ಕಥಾನಕದ ದೈವೀಆಕಾರಗಳು ಉದಾಹರಣೆಗೆ ವಿವಿಧ ಕಾಲ, ವಿವಿಧ ಕ್ಷೇತ್ರ ಮತ್ತು ವಿವಿಧ ಧರ್ಮಗಳಲ್ಲಿ ಪರಿಕಲ್ಪಿಸಿಕೊಂಡ ಭಾವನಾಕೃತಿಗಳ ಕುರಿತಾದ ಅಧ್ಯಯನ.

**ಘಟಕ ನಾಲ್ಕು :** ಕಲೆ ಮತ್ತು ಸಮಾಜ: ಕಲೆಯಲ್ಲಿ ಕಂಡುಬರುವ ನಿತ್ಯ ಅನುಭವದ ಪ್ರತಿಬಿಂಬಗಳು. ಸಮಕಾಲೀನ ಕಲೆ: ದೃಶ್ಯಭಾಷೆಯಲ್ಲಿನ ಕಲೆ ಮತ್ತು ಉದ್ದೇಶಗಳಲ್ಲಿ ಕಂಡುಬಂದ ಬದಲಾವಣೆ. ವೈಯಕ್ತಿಕ ಮಾರ್ಗದರ್ಶಿಕೆ, ಭಾವನಾತ್ಮಕ ಕಲೆ, ಪ್ರತಿಷ್ಠಾಪನಾ ಕಲೆ ಇತ್ಯಾದಿ.

**ಘಟಕ ಐದು :** ದೃಶ್ಯಭಾಷೆಯ ಮೂಲ ತತ್ವಗಳು: ರೇಖೆ, ವರ್ಣ, ಆಕಾರ, ಅವಕಾಶ, ಮೈವಳಿಕೆ, ಸಂಯೋಜನೆ, ಪುನರಾವರ್ತನೆ, ಕ್ರಮಬದ್ಧ ಶ್ರೇಣಿ, ಚಲನೆ, ಲಯ ಮುಂತಾದವುಗಳು, ಸಮಕಾಲೀನ ಕಲಾಸಂದರ್ಭ ಮತ್ತು ದೃಶ್ಯಭಾಷೆಯ ಹೊಸ ಸಾಧ್ಯತೆಗಳು, ಕರ್ನಾಟಕದಲ್ಲಿ ದೃಶ್ಯಭಾಷೆಯ ಸಾಹಿತ್ಯ ಮತ್ತು ವಿಮರ್ಶೆಯ ಸಾಹಿತಿಳ ಸ್ಥೂಲ ಪರಿಚಯ.

***ಪರಾಮರ್ಶನ ಗ್ರಂಥಗಳು :***


೧. ವರ್ಣನಾತ್ಮಕ ಭಾಷಾವಿಜ್ಞಾನ : ಡಾ. ರಾಜೇಶ್ವರಿ ಮಹೇಶ್ವರಯ್ಯ
೨. ಕಲಾ ಪ್ರಪಂಚ : ಡಾ. ಶಿವರಾಮ ಕಾರಂತ
೩. ಆಧುನಿಕ ಕಲೆ : ಪಾಲಕ್ಲೆ (ಅನು) ಕೆ.ಎಸ್. ಶ್ರೀನಿವಾಸಮೂರ್ತಿ
೪. ಚಿತ್ರಕಲಾ ದರ್ಪಣ : ವಿ.ಟಿ. ಕಾಳೆ
೫. ಚಿತ್ರಕಲಾ ಪ್ರಪಂಚ : (ಪ್ರ.ಸಂ.) ಪಿ.ಆರ್. ತಿಪ್ಪೇಸ್ವಾಮಿ
೬. ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು : (ಸಂ.) ಡಾ. ಎಸ್.ಸಿ. ಪಾಟೀಲ
೭. ಕಲಾ ಸಂವೇದನೆಯ ಒಳನೋಟಗಳು : ಕೆ.ವ್ಹಿ. ಸುಬ್ರಹ್ಮಣ್ಯಂ


**ತಾತ್ವಿಕ ಪತ್ರಿಕೆ : ೧೭. ಪ್ರಬಂಧ ರಚನೆ (Dissertation) (೧೦೦ ಅಂಕಗಳು)**

**ಘಟಕ ಒಂದು :** ಕಿರು ಸಂಶೋಧನಾ ಪ್ರಬಂಧ ರಚನೆಗಾಗಿ ಕಲಾ ಅಧ್ಯಯನ ಕ್ಷೇತ್ರವನ್ನು ಅನುಲಕ್ಷಿಸಿ ಅದಕ್ಕೆ ಪೂರಕವಾಗಬಲ್ಲ ವಿಷಯಗಳನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬೇಕು. ನಂತರ ತಮ್ಮ ವಿಭಾಗದ ಮುಖ್ಯಸ್ಥರ ಇಲ್ಲವೆ ಪ್ರಾಧ್ಯಾಪಕರ ಸೂಕ್ತ ಮಾರ್ಗದರ್ಶನ ಪಡೆದು ಅವರ ಸಲಹೆ ಸೂಚನೆಗಳ ಆಧಾರದ ಮೇಲೆ ಆಯ್ದುಕೊಂಡ ವಿಷಯದ ಬಗ್ಗೆ ಕ್ಷೇತ್ರಕಾರ್ಯ ನಡೆಸಲು ಯೋಜನೆ ಸಿದ್ಧಪಡಿಸಿಕೊಳ್ಳಬೇಕು. ಹಾಗೂ ಮೂರನೆಯ ಸೆಮಿಸ್ಟರ್‌ನ ಪ್ರಾರಂಭದಲ್ಲಿಯೇ ಕಾರ್ಯಪ್ರವೃತ್ತರಾಗಬೇಕು. ಮತ್ತು ಯೋಜನೆಯ ಪ್ರಕಾರ ಕ್ಷೇತ್ರಕಾರ್ಯ/ಲೇಖನ ಕಾರ್ಯಗಳನ್ನು ಹಾಗೂ ತಮ್ಮ ಇತರೆ ಪಠ್ಯ ವಿಷಯಗಳ ಅಧ್ಯಯನಕ್ಕೆ ಅಡಚಣೆಯಾಗದಂತೆ ಪ್ರಗತಿಪರರಾಗಿ, ಯೋಜನಾಬದ್ಧರಾಗಿ ಕೈಗೊಳ್ಳಬೇಕು. ಪ್ರಬಂಧ ಕಾರ್ಯ ನಾಲ್ಕನೆಯ ಸೆಮಿಸ್ಟರ್ ಕೊನೆಗೊಳ್ಳುವುದರೊಳಗಾಗಿ, ಪರೀಕ್ಷಾ ಪ್ರಾರಂಭವಾಗುವುದಕ್ಕಿಂತ ಎರಡು ವಾರ ಮುಂಚಿತವಾಗಿ ನಿಗದಿತ ಅವಧಿಯಲ್ಲಿ ತಮ್ಮ ಮಾರ್ಗದರ್ಶಕರಿಂದ ಲೇಖನದ ಪರಾಮರ್ಶನದ ಕಾರ್ಯ ಪೂರ್ಣಗೊಳಿಸಿ ಮೌಲ್ಯಮಾಪನಕ್ಕಾಗಿ ತಮ್ಮ ವಿಭಾಗದ ಮುಖ್ಯಸ್ಥರಿಗೆ ಒಪ್ಪಿಸಬೇಕಾಗುವುದು. ಬಾಹ್ಯ ಮತ್ತು ಆಂತರಿಕ ಇಬ್ಬರು ಮೌಲ್ಯಮಾಪನ ಮಾಡುತ್ತಾರೆ. ೩೦ ಅಂಕಗಳು ಮೌಖಿಕ ಪರೀಕ್ಷೆಗೆ ಹಾಗೂ ೭೦ ಅಂಕಗಳು ಮೌಲ್ಯಮಾಪನಕ್ಕೆ ಇರುತ್ತವೆ.

## ***ಪ್ರಾಯೋಗಿಕ ಪತ್ರಿಕೆಗಳು***

**ಪ್ರಾಯೋಗಿಕ ಪತ್ರಿಕೆ ೧೮ : ಸೃಜನಶೀಲ ರೇಖಾಚಿತ್ರಣ IV(Creative Drawing) (ಅಂಕಗಳು ೧೦೦)**

**ಪ್ರಾಯೋಗಿಕ ಪತ್ರಿಕೆ ೧೯ : ಸೃಜನಶೀಲ ವರ್ಣಚಿತ್ರಣ IV(Creative Painting) (ಅಂಕಗಳು ೧೦೦)**

**ಪ್ರಾಯೋಗಿಕ ಪತ್ರಿಕೆ ೨೦ : ಸೃಜನಶೀಲ ಭಿತ್ತಿಚಿತ್ರಣ IV(Creative Mural Painting) (ಅಂಕಗಳು ೧೦೦)**